ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ ನಿಲಯಗಳ ಸಂಖ್ಯೆ

532 - ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು.

ಆ) ಮೈಸೂರಿನಲ್ಲಿ ಎಷ್ಟಿವೆ?

ಇ) ಏರುತ್ತಿರುವ ಜನಸಂಖ್ಯೆಗನುಗುಣವಾಗಿ ಮೈಸೂರಿಗೆ ಮತ್ತೊಂದು ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡಲಾಗುವುದೇ;

ಈ) ಬರುವ ಶೈಕ್ಷಣಿಕ ವರ್ಷದಲ್ಲೇ ಮಂಜೂರು ಮಾಡಲಾಗುವುದೆ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗಾಗಿ ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳ ವಿವರ ಕೆಳಕಂಡಂತಿದೆ :

1.	ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು	-	950
2.	ಸರ್ಕಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು	-	147
3.	ಅನುದಾನಿತ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳು	-	295
4.	ಮಾನ್ಯತೆ ಪಡೆದ ಖಾಸಗಿ ಕಾಲೇಜು ವಿದ್ಯಾರ್ಥಿನಿಲಯಗಳು	-	74
	ಒಟ್ಟು	**-**	**1466**

ಆ) ಮೈಸೂರು ನಗರದಲ್ಲಿ 4 ಸರ್ಕಾರಿ ಹಾಗೂ 6 ಅನುದಾನಿತ ವಿದ್ಯಾರ್ಥಿನಿಲಯಗಳಿವೆ.

ಇ) ಪ್ರಸಕ್ತ ಸಾಲಿನಲ್ಲಿ ಮೈಸೂರು ನಗರಕ್ಕೆ ಅನುಸರಿಸಿ ಮುಂದಿನ ಕಾಲೇಜು ವಿದ್ಯಾರ್ಥಿನಿಲಯಗಳು ಮಂಜೂರಾಗಿವೆ.

ಈ) ಅವಶ್ಯಕತೆ ಮತ್ತು ಹಣದ ಲಭ್ಯತೆಯನ್ನು ಅನುಸರಿಸಿ ಮುಂದಿನ ವರ್ಷದಲ್ಲಿ ಹೊಸ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸುವಾಗ ಪರಿಶೀಲಿಸಲಾಗುವುದು.

ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗೆ ಕೇಂದ್ರದ ಅನುಮತಿ

533 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ

ಆ) ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಅರ್ಜಿಗಳನ್ನು ಸಲ್ಲಿಸಿದವರಾರು?

ಇ) ರಾಜ್ಯದಲ್ಲಿ ಪ್ರತಿ ವರ್ಷ ಬೆಳೆಯುವ ಕಬ್ಬಿನ ಪ್ರಮಾಣವೆಷ್ಟು?

ಶ್ರೀ ಪಿ.ಸಿ. ಸಿದ್ದನಗೌಡರ (ಸಕ್ಕರೆ,ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು) :

ಅ) 1988-89 ರಲ್ಲಿ ಮೂರು ಹಾಗೂ ಮಾರ್ಚ 1994ರಲ್ಲಿ ಐದು ಪರವಾನಿಗಳನ್ನು ನೀಡಿದ್ದು, ತದನಂತರ ಯಾವ ಪರವಾನಿಗೆಯನ್ನೂ ನೀಡಿರುವುದಿಲ್ಲ.

ಆ) 1995 ರಿಂದ ಈಚೆಗೆ ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಬಂದಿರುವ ಅರ್ಜಿಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ಇ) 1995-96ರ ಸಾಲಿನಲ್ಲಿ ಸುಮಾರು 214 ಲಕ್ಷ ಟನ್ ಕಬ್ಬಿನ್ ಉತ್ಪನ್ನ ಅಂದಾಜು ಮಾಡಲಾಗಿರುತ್ತದೆ.

ಅನುಬಂಧ

ಕರ್ನಾಟಕ ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಸಲ್ಲಿಸಿರುವ ಪ್ರಸ್ತಾವನೆಗಳ ವಿವರ

ಕ್ರಮ ಸಂಖ್ಯೆ	ಅರ್ಜಿದಾರರ ಹೆಸರು	ಕಾರ್ಖಾನೆ ಸ್ಥಾಪಿಸಬೇಕೆಂದಿರುವ ಸ್ಥಳ
ಮಂಡ್ಯ ಜಿಲ್ಲೆ		
1.	ಶ್ರೀರಂಗ ಶುಗರ್ಸ್ ಲಿ.	ಬೆಳಗೊಳ, ಅರಕೆರೆ ಶ್ರೀರಂಗಪಟ್ಟಣ ತಾ।।
2.	ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್ ಲಿ	ಬೆಳಗೊಳ, ಶ್ರೀರಂಗಪಟ್ಟಣ ತಾಲ್ಲೂಕು
3.	ಕೃಷ್ಣರಾಜಪೇಟೆ ಶುಗರ್ಸ್ ಲಿ.	ಕೆ.ಆರ್. ಪೇಟೆ
4.	ನೀರಾ ಕನ್‌ಸ್ಟ್ರಕ್ಷನ್ ಲಿ	ಹೇಮಗಿರಿ, ಕೆ.ಆರ್. ಪೇಟೆ ತಾಲ್ಲೂಕು
5.	ಬನ್ನೂರು ಶುಗರ್ಸ್ ಲಿ	ಬನ್ನೂರು, ಅರಕೆರೆ.
6.	ಪ್ರೇಮ್ ಶುಗರ್ಸ್ ಲಿ.	ಹೇಮಗಿರಿ, ಕೆ.ಆರ್.ಪೇಟೆ ತಾಲ್ಲೂಕು
7.	ಇಂಡಿಯು ಸಿಮೆಂಟ್ಸ್ ಲಿ	ಮಲ್ಲೇನಹಳ್ಳಿ, ಕೆ.ಆರ್. ಪೇಟೆ ತಾ।।
8.	ತುಳಸಿ ಶುಗರ್ಸ್ (ಲಿ)	ಕೆ.ಆರ್. ಪೇಟೆ ತಾಲ್ಲೂಕು ದೊಡ್ಡಕಟ್ಟೆ.

ಕ್ರಮ ಸಂಖ್ಯೆ	ಅರ್ಜಿದಾರರ ಹೆಸರು	ಕಾರ್ಖಾನೆ ಸ್ಥಾಪಿಸಬೇಕೆಂದಿರುವ ಸ್ಥಳ
ಬೆಳಗಾಂ ಜಿಲ್ಲೆ		
9.	ಭಾಗ್ಯ ಶ್ರೀ ಲಗಮವ್ವ ಶುಗರ್ಸ್ ಲಿ.	ಅಗವಾಡಿ, ರಾಯಬಾಗ ತಾಲ್ಲೂಕು.
10.	ಸಿರಗುಪ್ಪಿ ಶುಗರ್ಸ	ಸಿರಗುಪ್ಪಿ, ಅಥಣಿ ತಾಲ್ಲೂಕು.
11.	ವಿಶ್ವನಾಥ್ ಶುಗರ್ಸ	ಬೆಲ್ಲದಬಾಗೇವಾಡಿ, ಹುಕ್ಕೇರಿ ತಾಲ್ಲೂಕು.
12.	ವಿಜಯನಗರ ಆಗ್ರೋ ಇಂಡಸ್ಟ್ರೀಸ್	ಸಾಂಬರ್ಗ, ಅಥಣಿ ತಾಲ್ಲೂಕು
13.	ಮನಾಲಿ ಶುಗರ್ಸ್ ಲಿ.	ಸುರೇಬಾನ್, ರಾಮದುರ್ಗ ತಾಲ್ಲೂಕು.
14.	ಅರಿವಂತ್ ಶುಗರ್ಸ್ ಲಿ.,	ಬೋರ್ಗಾನ್,ಚಿಕ್ಕೋಡಿ ತಾಲ್ಲೂಕು.
15.	ಅಥಣಿ ಫಾರಮರ್ಸ್ ಶುಗರ್ ಫ್ಯಾಕ್ಟರಿ	ಮಾಧಬಾವಿ ,ಅಥಣಿ.
16.	ರೇಣುಕಾ ಶುಗರ್ಸ್	ಕೊಟಕನೂರು, ಅಥಣಿ ತಾಲ್ಲೂಕು
17.	ಪಟೇಲ್ ಸಿಮೆಂಟ್ಸ್	ಕನಕನವಾಡಿ, ರಾಯಭಾಗ್ ತಾಲ್ಲೂಕು
18.	ಕೌಜಲಗಿ ಶುಗರ್ಸ್	ಬಿಳಕುಂಡಿ, ಗೋಕಾಕ್ ತಾಲ್ಲೂಕು.
19.	ಅಪೋಲೋ ಡಿಸ್ಟಿಲರೀಸ್	ಹುಕ್ಕೇರಿ ತಾ॥
20.	ಶಶಿಕಾಂತ್ ಸಿರ್ನಾಳ್ ಶುಗರ್ಸ್ (ರೇಣುಕಾ ಶುಗರ್ಸ್)	ಮನೋಳಿ, ಸವದತ್ತಿ ತಾಲ್ಲೂಕು
21.	ಧನಲಕ್ಷ್ಮಿ ಸಹಕಾರ ಸಕ್ಕರೆ ಕಾರ್ಖಾನೆ ನ.	ಖಾನ್ ಪೇಟೆ,ರಾಮದುರ್ಗಾ.
22.	ಶಿವಶಕ್ತಿ ಶುಗರ್ಸ್	ಅಂಕಲಿ, ಚಿಕ್ಕೋಡಿ ತಾಲ್ಲೂಕು.
ಬಳ್ಳಾರಿ ಜಿಲ್ಲೆ		
23.	ಶಾಮನೂರು ಶುಗರ್ಸ್	ದುಗ್ಗಾವತಿ ಹಳ್ಳಿ, ಹರಪ್ಪನಹಳ್ಳಿ ತಾಲ್ಲೂಕು.
ಧಾರವಾಡ ಜಿಲ್ಲೆ		
24.	ವೀರಭದ್ರೇಶ್ವರ ಶುಗರ್ಸ ಲಿ.	ಬೆಟ್ಟಹಳ್ಳಿ, ಹಿರೇಕೆರೂರು ತಾಲ್ಲೂಕು
25.	ವಿರಾಟ ಶುಗರ್ಸ್ ಲಿ.	ಹಾಜಕೇನಹಳ್ಳಿ, ಹಾನಗಲ್ ತಾಲ್ಲೂಕು.
26.	ಮುರುಡೇಶ್ವರ ಸೆರಾಮಿಕ್ಸ	ಬೊಬ್ಬುನಹಳ್ಳಿ, ಹಾನಗಲ್ ತಾಲ್ಲೂಕು.

ಕ್ರಮ ಸಂಖ್ಯೆ	ಅರ್ಜಿದಾರರ ಹೆಸರು	ಕಾರ್ಖಾನೆ ಸ್ಥಾಪಿಸಬೇಕೆಂದಿರುವ ಸ್ಥಳ
27.	ಬಸವೇಶ್ವರ ಸನಕಾ (ನಿ)	ಕರಿಗೇರಿ, ಹಿರೇಕೆರೂರು ತಾಲ್ಲೂಕು.
28.	ಮೃಡಗಿರಿ ಸಸಕಾ (ಲಿ)	ಗಂಗಾಪುರ, ಮುಂಡರಗಿ ತಾಲ್ಲೂಕು.
29.	ನರಗುಂದ ಸಸಕಾ (ಲಿ)	ಕೊನ್ನೂರು, ನರಗುಂದ ತಾಲ್ಲೂಕು.
30.	ಫಾರಮರ್ಸ್ ಕೋ-ಅಪರೇಟಿವ್	ಗಂಗೀಭಾವಿ, ಶಿಗ್ಗಾಂವ್,ಧಾರವಾಡ ಜಿಲ್ಲೆ.
	ಬೆಂಗಳೂರು ಗ್ರಾಮಾಂತರ ಜಿಲ್ಲೆ	
31.	ಪ್ಲೆಕ್ಸ್ ಇಂಜನೀಯರಿಂಗ್ ಲಿ.	ಬೈರಮಂಗಲ, ರಾಮನಗರ ತಾಲ್ಲೂಕು.
32.	ಎಸ್.ಪಿ. ಆರ್. ಶುಗರ್ಸ್ ಲಿ.	ಕಂಚುಗಾರನಹಳ್ಳಿ, ರಾಮನಗರ ತಾಲ್ಲೂಕು.
	ಬೀದರ್ ಜಿಲ್ಲೆ	
33.	ಶ್ರೀಗುರುಕೃಪ ಸುಪ್ರೀಮ್ ಕೆಮಿಕಲ್ಸ್	ರಾಜೇಶ್ವರ ಹಳ್ಳಿ, ಬಸವಕಲ್ಯಾಣ ತಾ:
	ಹಾಸನ ಜಿಲ್ಲೆ	
34.	ಸಂಗೀತ ಶುಗರ್ಸ್ ಮತ್ತು ಕೆಮಿಕಲ್ಸ್	ಯೋಗಿಹಳ್ಳಿ, ಹಾಸನ ತಾಲ್ಲೂಕು.
35.	ಚಾಮುಂಡೇಶ್ವರಿ ಶುಗರ್ಸ್	ದೊಡ್ಡಬ್ಯಾಗತಹಳ್ಳಿ, ಹೊಳೆನರಸೀಪುರ ತಾ:
36.	ಕೆ.ಜಿ. ಶುಗರ್ಸ ಅಂಡ್ ಕೆಮಿಕಲ್ಸ್	ಹೊಳೆನರಸೀಪುರ
37.	ಜಯಲಕ್ಷ್ಮಿ ಶುಗರ್ಸ್	ಹೊಳೆನರಸೀಪುರ
	ಬಿಜಾಪುರ ಜಿಲ್ಲೆ	
38.	ಶ್ರೀ ದುರ್ಗಾ ಶುಗರ್ಸ್ ಲಿ	ಚಿಚ್ಚಕಂಡಿ, ಮುಧೋಳ್, ತಾಲ್ಲೂಕು.
39.	ಇಂಡಿಯನ್ ಶುಗರ್ಸ ಮತ್ತು ಪವರ್ಸ್	ಮೆಟಕುಡ್,ಮುಧೋಳ್ ತಾಲ್ಲೂಕು
40.	ಜೆಮ್ ಶುಗರ್ಸ್	ಕುಂದರಗಿ ಬಿಳಗಿ ತಾಲ್ಲೂಕು
41.	ಪ್ರಭುಲಿಂಗೇಶ್ವರ ಶುಗರ್ಸ್	ಸಿದ್ದಾಪುರ, ಜಮಖಂಡಿ ತಾಲ್ಲೂಕು.
42.	ಮನೋಳಿ ಶುಗರ್ಸ್ ಲಿ.	ಯಲಗೂರು, ಮುದ್ದೆಬಿಹಾಳ್, ತಾ।
43.	ಇಂಡಿಯನ್ ಕೇನ್ ಪವರ್ ಲಿ.	ಉತ್ತೂರು, ಮುದ್ದೇಬಿಹಾಳ್ ತಾ।
44.	ಉಷಾಮೇನೆಟೀಸ್ ಇಂಡಸ್ಟ್ರೀಸ್	ನೆಲತಮಂಜ್, ಮುದ್ದೇಬಿಹಾಳ್ ತಾ।

ಕ್ರಮ ಸಂಖ್ಯೆ	ಅರ್ಜಿದಾರರ ಹೆಸರು	ಕಾರ್ಖಾನೆ ಸ್ಥಾಪಿಸಬೇಕೆಂದಿರುವ ಸ್ಥಳ
ಮೈಸೂರು ಜಿಲ್ಲೆ		
45.	ಎಂ. ಅಂಡ್ ಸಿ. ಎಕ್ಸ್‌ಪೋರ್ಟ್ ಇಂಡಸ್ಟ್ರೀಸ್	ಟದ್ದಿಹಳ್ಳಿ, ಹುಣಸೂರು ತಾಲ್ಲೂಕು
46.	ಚಂದ್ರಪ್ರಕಾಶ್ ಶುಗರ್ಸ್	ಬನ್ನೂರು, ಟಿ.ನರಸೀಪುರ ತಾಲ್ಲೂಕು
47.	ಶಿವ ಶುಗರ್ಸ ಲಿ	ಹಾರೋಹಳ್ಳಿ, ಮೈಸೂರು ತಾಲ್ಲೂಕು
48.	ಬನ್ನೂರು ಶುಗರ್ಸ	ಬನ್ನೂರು, ಟಿ. ನರಸೀಪುರ ತಾ:
49.	ಸಂಗೀತ ಶುಗರ್ಸ ಅಂಡ್ ಕೆಮಿಕಲ್ಸ್	ಮುದಾಪುರ, ಚಾಮರಾಜನಗರ ತಾಲ್ಲೂಕು
50.	ಬಿಳಿಗಿರಿ ಶುಗರ್ಸ ಲಿ.	ಹನೂರು, ಕೊಳ್ಳೆಗಾಲ ತಾಲ್ಲೂಕು.
51.	ಬೊರೋಕಪವರ್ ಕಾರ್ಪೋರೇಷನ್ (ಲಿ)	ತೆರಕನಾಂಬಿ, ಗುಂಡ್ಲಪೇಟೆ ತಾಲ್ಲೂಕು.
ತುಮಕೂರು ಜಿಲ್ಲೆ		
52.	ಸಿದ್ದಲಿಂಗೇಶ್ವರ ಶುಗರ್ಸ್	ಕಲ್ಲೂರು ಕ್ರಾಸ್, ಗುಬ್ಬಿ ತಾಲ್ಲೂಕು.
53.	ಅಶೋಕ್ ಶುಗರ್ಸ್ ಮತ್ತು ಕೆಮಿಕಲ್ಸ್	ಹೆರೂರು, ಗುಬ್ಬಿ ತಾಲ್ಲೂಕು.
54.	ಪರಮೇಶ್ವರ ಶುಗರ್ಸ್	ಗುಬ್ಬಿ.
ಶಿವಮೊಗ್ಗ ಜಿಲ್ಲೆ		
55.	ಅಂಜನೇಯ ಶುಗರ್ಸ್	ಕುಂದೂರು, ಹೊನ್ನಾಳಿ ತಾಲ್ಲೂಕು
ಗುಲ್ಬರ್ಗಾ ಜಿಲ್ಲೆ		
56.	ಚಿಂಚೋಳಿ ಶುಗರ್ಸ್	ಚಿಂಚೋಳಿ, ಚಿಂಚೋಳಿ ತಾಲ್ಲೂಕು
57.	ಉಷಾ ಬೆಲಟ್ರಾನ್(ಲಿ)	ನಾರಾಯಣಪುರ, ಶರಾಪುರ ತಾ:

ಸರ್ಕಾರದ ಸ್ವಾಮ್ಯದಲ್ಲಿರುವ ಕೈಗಾರಿಕೆಗಳ ವಿವರ

535 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಾರ್ವಜನಿಕ ವಲಯದಲ್ಲಿ ಕರ್ನಾಟಕ ಸರ್ಕಾರದ ಸ್ವಾಮ್ಯದಲ್ಲಿ ಕೆಲಸ ಮಾಡುತ್ತಿರುವ ಕೈಗಾರಿಕೆಗಳು ಎಷ್ಟು?*